ಇ) ಮಾನ್ಯತೆ ಪಡೆದ ಜಿಲ್ಲಾಮಟ್ಟದ ಪತ್ರಿಕೆಗಳ ಪತ್ರಕರ್ತರಿಗೆ, ನಗರ ಸಾರಿಗೆ ಇರುವಡೆ ಬಸ್‌ಪಾಸ್, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ರಿಯಾಯತಿ ದರದಲ್ಲಿ ಪ್ರಯಾಣಿಕರು ಬಸ್ ಕೂಪನ್ ನೀಡಲಾಗುತ್ತಿದೆ.

2) ಕಾರ್ಯನಿರತ ಪತ್ರಕರ್ತರಾಗಿದ್ದು ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನಿಯಮಗಳ ಅನುಸಾರ ಪ್ರತಿ ತಿಂಗಳು 250-00 ರೂ.ಗಳ ಮಾಶಾಸನ ನೀಡಲಾಗುತ್ತಿದೆ. ಇವರು ಮೃತರಾದಲ್ಲಿ ಇವರ ಕುಟುಂಬದವರಿಗೆ ಪ್ರತಿ ತಿಂಗಳು 100 ರೂ.ಗಳ ಕುಟುಂಬ ಮಾಶಾಸನ ನೀಡಲಾಗುತ್ತಿದೆ.

3) ಜಿಲ್ಲಾಮಟ್ಟದ ಪತ್ರಿಕೆಗಳ ಸಂಪಾದಕರುಗಳಿಗೆ ಜಿಲ್ಲಾಮಟ್ಟದ ಪ್ರವಾಸವನ್ನು ಅಲ್ಲದೆ ಅಂತರ ಜಿಲ್ಲಾ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ.

4) ಸಭೆ ಸಮಾರಂಭಗಳಿಗೆ ಪತ್ರಕರ್ತರನ್ನು ಕರೆದೊಯ್ಯಲಾಗುತ್ತಿದೆ. ಪ್ರತಿ ನಿತ್ಯ ಪತ್ರಿಕಾ ಪ್ರಕಟಣೆಗಳನ್ನು ನೀಡಲಾಗುತ್ತಿದೆ.

5) ಪತ್ರಿಕಾ ಅಕಾಡೆಮಿವತಿಯಿಂದ ತರಬೇತಿ ಏರ್ಪಡಿಸಲಾಗುತ್ತಿದೆ ಹಾಗೂ ಪ್ರಶಸ್ತಿಗಳನ್ನು ಸಹ ನೀಡಲಾಗುತ್ತಿದೆ.

ಸೇಡಂ ತಾಲ್ಲೂಕಿನ ನರೆಟ್ಲಾ ಪಾಡ ಹೊಸಕೆರೆ ಕುರಿತು.

3097-ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೊಲುಮಾಮಿಡಿ ಸಮೀಪ ನರೆಟ್ಲಾಪಾಡ ಹೊಸ ಕೆರೆ ನಿರ್ಮಾಣ ಮಾಡಿದರೆ ಕನಿಷ್ಟ 1500 ಎಕರೆ (ಹದಿನೈದನೂರು ಎಕರೆ) ನೀರಾವರಿಯಾಗಿ ರೈತರಿಗೆ ಲಾಭದಾಯವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 1990-91 ಮತ್ತು 1991-92ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗಳು ಸೇರಿದ್ದರೂ ಕೂಡ ಇಮವರೆವಿಗೂ ಕಾರ್ಯವು ಪ್ರಾರಂಭವಾಗದಿರಲು ಕಾರಣವೇನು?

ಇ) ಕಡಿಮೆ ವೆಚ್ಚದಿಂದ ಹೆಚ್ಚಿನ ನೀರಾವರಿಯಾಗುವ ಈ ಹೊಸ ಕೆರೆಯನ್ನು ಮಾಡಿ ರೈತರಿಗೆ (ಈ ಭಾಗದ ಜನರಿಗೆ) ಅನುಕೂಲ ಮಾಡಿಕೊಡುವುದು ಎಂದಿನಿಂದ:

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು)

ಅ) ಇಲ್ಲ.

ಆ) 1990-91 ಮತ್ತು 1991-92ನೇ ಸಾಲಿನ ಆಯವ್ಯಯದಲ್ಲಿ ಪಟ್ಟಿಯಲ್ಲಿ ಸೇರಿಲ್ಲ.

ಇ) ಈ ಬಗ್ಗೆ ಕಾರ್ಯಕ್ರಮವಿಲ್ಲ.

ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಸಾಮಾನ್ಯ ಸಭೆಯ ನಿರ್ಣಯವನ್ನು ಲೆಕ್ಕಿಸದ ಹಣ ಬಿಡುಗಡೆ.

2996-ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗ ಜಿಲ್ಲಾ ಪರಿಷತ್‌ನಲ್ಲಿ ಪ್ರೌಢಶಾಲೆಗಳಿಗೆ ಹಾಗೂ ಇತರ ಇಲಾಖೆಗಳಿಗೆ ಸಾಮಗ್ರಿಗಳು ಖರೀದಿಯಾಗಿದ್ದವುಗಳು ಕಳಪೆ ದರ್ಜೆಯೆಂಬ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

ಆ) ಈ ಬಗ್ಗೆ ಗುಲ್ಬರ್ಗಾ ಜಿಲ್ಲಾ ಪರಿಷತ್ ವಿಚಾರಣಾ ಸಮತಿಯನ್ನು ರಚಿಸಿ ವಿಚಾರಣೆಯಾಗುವವರೆಗೆ ಯಾವ ಖರೀದಿಗಾಗಿ ಹಣವನ್ನು ಬಿಡುಗಡೆ ಮಾಡಬಾರದೆಂದು ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡಿರುವುದು ನಿಜವೇ?

ಇ) ಒಂದು ವೇಳೆ ಆ ಪ್ರಕಾರ ನಿರ್ಣಯ ಕೈಗೊಂಡಿದ್ದರೆ ವಿಚಾರಣೆ ವರದಿ ಬರುವುದಕ್ಕಿಂತ ಮೊದಲೇ ಪುನಃ ಖರೀದಿಗಾಗಿ ಹಣ ಬಿಡುಗಡೆ ಮಾಡಿದ್ದೇಕೆ?

ಈ) ಈ ಪ್ರಕಾರ ಹಣ ಬಿಡುಗಡೆ ಮಾಡಿದ್ದಕ್ಕೆ ಕಾರಣಕರ್ತನಾದ ಅಧಿಕಾರಿಗಳು ಯಾರು ಹಾಗೂ ಅವರ ಮೇಲೆ ಕೈಗೊಳ್ಳುವ ಕ್ರಮವೇನು?

ಶ್ರೀ ಕೆ. ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕೇಂದ್ರವಲಯ ಪ್ರದೇಶಗಳ ಬರಪೀಡಿತ ಪ್ರದೇಶಗಳ ಅಭಿವೃದ್ಧಿ

3133-ಶ್ರೀ ಶಿವಾನಂದ ಹೆಚ್.ಕೌಜಲಗಿ (ಛೆಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಳಗಾಂ ಜಿಲ್ಲೆಯಲ್ಲಿ ಕೇಂದ್ರ ವಲಯ ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಯಾವ ಯಾವ ತಾಲ್ಲೂಕುಗಳು ಬರುತ್ತವೆ.

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಎಷ್ಟು ಹಣ ಖರ್ಚು ಮಾಡಲಾಗಿದೆ? (ಪ್ರತಿಯೊಂದು ಕೆಲಸದ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಕೇಂದ್ರ ವಲಯ ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಬರುವ ತಾಲ್ಲೂಕುಗಳು ಈ ಕೆಳಗಿನಂತಿವೆ.

1. ಅಥಣಿ
2. ಗೋಕಾಕ
3. ರಾಮದುರ್ಗ
4. ಸೌಂದತ್ತಿ.

ಆ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಮತ್ತು ಖರ್ಚು ಮಾಡಿದ ವಿವರ ಈ ಕೆಳಕಂಡಂತಿದೆ.